ಶ್ರೀ ಪೆರಿಕಲ್ ಎಂ. ಮಲ್ಲಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಮಂತ್ರಿಗಳು ಉತ್ತರ ಕೊಡಲಿಲ್ಲ. ಲೋಕೋಪಯೋಗಿ ಇಲಾಖೆಯ ಜೊತೆ ಕರೆಸ್ಪಾಂಡೆನ್ಸ್ ಮಾಡಿ ವಾಟರ್ ತೆಗೆದುಕೊಳ್ಳುತ್ತೇವೆಂದು ಮಂತ್ರಿಗಳು ಹೇಳಿದ್ದಾರೆ. ನಾಳೆ ಕೆಆರ್ ಎಸ್ ನಿಂದ ವಾಟರ್ ರಿಲೀಸ್ ಮಾಡುವುದಿಲ್ಲ, ತಮಿಳುನಾಡಿನವರು ಎಲ್ಲಾ ನೀರನ್ನು ಹೊತ್ತುಕೊಂಡು ಹೋಗುತ್ತಾರೆ. ಆಗ ಬೆಂಗಳೂರು ಮಹಾನಗರಕ್ಕೆ ಎಲ್ಲಿಂದ ನೀರನ್ನು ಡ್ರಾ ಮಾಡುತ್ತೀರಿ? ಈ ದಿಸೆಯಲ್ಲಿ ಕೆಲವು ಕ್ಲೈಮ್ಸ್ ಏನಾದರೂ ಕಾವೇರಿ ವಾಟರ್ ಟ್ರಿಬ್ಯುನಲ್‌ಗೆ ಹಾಕಿದ್ದೀರಾ? ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿಗಾಗಿ ಇಷ್ಟ ನೀರು ಕೊಡಿಯೆಂದು ಕ್ಲೈಮ್ ಹಾಕಿದ್ದಿದ್ದರೆ, ನೀವು ಹೋಗಿ ಅಲ್ಲಿ ನೀರು ಡ್ರಾ ಮಾಡುವುದಕ್ಕೆ ಹೋದರೆ ನಾಳೆ ಅಲ್ಲಿ ರೈತರು ಬೊಂಬಡಾ ಹೊಡೆಯುತ್ತಾರೆ. ನಾನು ಈ ಪ್ರಶ್ನೆಯನ್ನು ಕೇಳಿದ್ದಕ್ಕೆ ಮಂತ್ರಿಗಳು ಉತ್ತರ ಹೇಳಲಿಲ್ಲ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ. ಕಾವೇರಿಯಿಂದ ಕುಡಿಯುವ ನೀರು ಡ್ರಾ ಮಾಡುವುದಕ್ಕೆ ಯಾವುದೇ ಇಂಟರ್‌ಸ್ಟೇಟ್ ಡಿಸ್‌ಪ್ಯೂಟ್ ಆಡ್ಡ ಬರುವುದಿಲ್ಲ. ನಾನು ಏನು ಹೇಳಿದ್ದೇನೆಂದರೆ ನಮ್ಮ ಇರಿಗೇಷನ್ ಡಿಪಾರ್ಟ್‌ಮೆಂಟ್‌ನಿಂದ ನಾವು ಪರ್ಮಿಶನ್ ಕೆಗೆದುಕೊಳ್ಳಬೇಕಾಗಿದೆ. ಈಗಾಗಲೇ ಪರ್ಮಿಷನ್ ತೆಗೆದುಕೊಂಡಿದ್ದೇವೆ. ನೀರು ಡ್ರಾ ಮಾಡುವ ವಿಚಾರದಲ್ಲಿ ಯಾವುದೇ ತೊಂದರೆಯಿಲ್ಲ. ಈ ವಿಚಾರದಲ್ಲಿ ಮಾನ್ಯ ಸದಸ್ಯರು ಯಾವುದೇ ಆತಂಕವನ್ನು ವ್ಯಕ್ತಪಡಿಸುವ ಅವಶ್ಯಕತೆಯಿಲ್ಲ. ಇದು ಪಂಚವಾರ್ಷಿಕ ಯೋಜನೆಯಲ್ಲಿ ಅಪ್ರೂವಲ್ ಆಗಿ ಬಂದಿದೆ. ಪೆಂಡಿಂಗ್ ಪ್ಯಾಟ್ಸನ್ ಯಾವ ರೀತಿ ಮಾಡಬೇಕು ನಮ್ಮ ಬಜೆಟ್‌ನಲ್ಲಿ ಎಷ್ಟು ಹಣ ಇಡಬೇಕು ಈ ವಿಚಾರವನ್ನು ಈಗಾಗಲೇ ನಾವು ಅದನ್ನು ವರ್ಕ್ ಔಟ್ ಮಾಡುತ್ತಿದ್ದೇವೆ. ಹುಡ್ಕೋದಿಂದ ಹಣ ತೆಗೆದುಕೊಳ್ಳಬೇಕೇ ಅಥವಾ ಎಲ್‌ಐಸಿ ಯಿಂದ ತೆಗೆದುಕೊಳ್ಳಬೇಕೇ ಅಥವಾ ವರ್ಲ್ಡ್ ಬ್ಯಾಂಕಿನಿಂದ ತೆಗೆದುಕೊಳ್ಳಬೇಕೇ ಎನ್ನುವ ವಿಚಾರದಲ್ಲಿ ನಾವು ಈಗಾಗಲೇ ಪರಿಶೀಲನೆ ಮಾಡುತ್ತಿದ್ದೇವೆ. ನನಗನಿಸುತ್ತಿದೆ ಎಲ್‌ಐಸಿ ಮತ್ತು ಹುಡ್ಕೋದಿಂದ ಬೆಂಗಳೂರು ವಾಟರ್ ಸಪ್ಲೈ ಸ್ಕೀಮ್‌ಗೆ ಹಣ ಕೊಡುವುದಕ್ಕೆ ಅವರು ಈಗಾಗಲೇ ಮುಂದೆ ಬಂದಿದ್ದಾರೆ. ಬಹುಶಃ ಅದನ್ನು ತೆಗೆದುಕೊಂಡರೆ ಅದಷ್ಟು ಬೇಗ ಆಗಬಹುದು. ವರ್ಲ್ಡ್ ಬ್ಯಾಂಕಿನದು ಆದರೆ ಅವರ ರಿಕ್ವೈರ್‌ಮೆಂಟ್‌ಗಳನ್ನು ಫುಲ್‌ಫಿಲ್ ಮಾಡುವುದಕ್ಕೆ ಸಮಯವಾಗುತ್ತದೆ. ಆದರೂ ಸಹ ವರ್ಲ್ಡ್ ಬ್ಯಾಂಕಿನ ವಿಚಾರದಲ್ಲಿ ನಾವು ಪರಿಶೀಲನೆ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕಾವೇರಿ ಮೂರನೆಯ ಹಂತ

1728. ಶ್ರೀ ಎಂ. ಮುನಿಸ್ವಾಮಿ (ಶಾಂತಿನಗರ) : ನಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾವೇರಿ ನೀರಿನ 3ನೇ ಹಂತದ ಕಾರ್ಯ ಯಾವಾಗ ಪ್ರಾರಂಭವಾಯಿತು?

ಆ) ಈ ಯೋಜನೆಯ ಒಟ್ಟು ವೆಚ್ಚವೆಷ್ಟು?

ಇ) 3ನೇ ಹಂತದ ಈ ಕಾರ್ಯವು ಯಾವಾಗ ಪೂರ್ಣಗೊಳ್ಳುವುದು?

ಈ) ಈ ಯೋಜನೆ ಪೂರ್ಣಗೊಂಡಾಗ ಬೆಂಗಳೂರು ನಗರಕ್ಕೆ ಎಷ್ಟು ಹೆಚ್ಚುವರಿ ನೀರು ದೊರೆಯುತ್ತದೆ?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ) ಕಾವೇರಿ 3ನೇ ಹಂತದ ಯೋಜನೆಯ ಪ್ರಾಥಮಿಕ ಕೆಲಸಗಳನ್ನು 1985-86ರಲ್ಲಿ ಪ್ರಾರಂಭಿಸಿ ಬೃಹತ್ ಕಾಮಗಾರಿಗಳನ್ನು 1988-89ರಲ್ಲಿ ಪ್ರಾರಂಭಿಸಲಾಯಿತು.

ಆ) ಕಾವೇರಿ 3ನೇ ಹಂತದ ಯೋಜನೆಯ ಅಂದಾಜು ವೆಚ್ಚ ರೂ. 240.00 ಕೋಟಿಗಳು.

ಇ) ಈ ಯೋಜನೆಯನ್ನು ಜೂನ್ 1992ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಕಾವೇರಿ 3ನೇ ಹಂತದ ಯೋಜನೆ ಪೂರ್ಣಗೊಂಡಾಗ ನಗರಕ್ಕೆ ದಿನಂಪ್ರತಿ 270 ದಶ ಲಕ್ಷ ಲೀಟರ್ ಹೆಚ್ಚುವರಿ ನೀರು ದೊರೆಯುತ್ತದೆ.

ಕರ್ನಾಟಕದ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳು

1965. ಶ್ರೀ ಕೆ. ಹರ್ಷಕುಮಾರ ಗೌಡ (ಚಾಮರಾಜ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಸೇವೆ ಸಲ್ಲಿಸುತ್ತಿರುವ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳಲ್ಲಿ ಕರ್ನಾಟಕಕ್ಕೆ ಸೇರಿದ ಅಧಿಕಾರಿಗಳ ಸಂಖ್ಯೆ ಎಷ್ಟು?

ಆ) ಕರ್ನಾಟಕದ ಮೂಲದ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಯಾವ ಯಾವ ಸ್ಥಾನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ ಮತ್ತು ಅವರುಗಳ ಹೆಸರುಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಯವರು) :

ಅ) ಐ.ಎ.ಎಸ್. ಅಧಿಕಾರಿಗಳ ಸಂಖ್ಯೆ 106

ಐ.ಪಿ.ಎಸ್. ಅಧಿಕಾರಿಗಳ ಸಂಖ್ಯೆ 55

ಆ) ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ.